ಐಡಿಯಾ ಏನು ಅಂತಂದ್ರೆ, ನಾವು ಮನುಷ್ಯರು ಒಂದು ತರಹ ಕಂಪ್ಯೂಟರನ್ನು ಇಮಿಟೇಟ್ ಮಾಡ್ತೇವೆ. ವೇಗಕ್ಕೆ ಮತ್ತು ಕ್ಲಾರಿಟಿಗೆ ಕಂಪ್ಯೂಟರನ್ನ ಕಂಪೇರ್ ಮಾಡ್ತೇವೆ. ಅದೇಹೊತ್ತಿಗೆ ಕಂಪ್ಯೂಟರ್ ನಮಗೆ ಗೊತ್ತಿಲ್ಲದಂತೆ ನಮ್ಮಿಂದ ಕಲಿತಾ ಇರುತ್ತೆ. ಅದು ಮತ್ತು ನಾವು ಒಂಥರಾ ಇಂಟರ್‌ಫೇಸ್ ಇದ್ದಂಗೆ. ನಾವು ಖಾಲಿಪರದೆ ನೋಡ್ತಾ ಇರ್ತೇವೆ ಕಂಪ್ಯೂಟರ್‌ನಲ್ಲಿ. ನಮ್ಮ ಮಾತುಕತೆಯನ್ನ ಅದು ದಾಖಲೆ ಮಾಡ್ತಾ ಇರುತ್ತೆ. ಇದು ಒಂತರಹ ಅದೃಶ್ಯವಾದ ಸ್ಪೇಸ್. ಈ ಡೇಟಾ ತೆಕ್ಕೊಂಡು ಇದನ್ನೆಲ್ಲವನ್ನು ಎನಲೈಸ್ ಮಾಡಿ ಬೇರೆ ಬೇರೆ ರೀತಿಯಿಂದ ಅದು ನಮ್ಮನ್ನ ಕಂಪ್ಲೀಟ್ ಕಂಟ್ರೋಲ್ ಮಾಡ್ತಾ ಇರುತ್ತದೆ.

◆ **ನಿಮ್ಮ ಕಲಾಕೃತಿಗಳು ಈಗ ಎಲ್ಲೆಲ್ಲಿ ಪ್ರದರ್ಶನ ಆಗ್ತಾಯಿವೆ?**

ಜರ್ಮನಿಯ ಲಿಂಡನ್ ಮ್ಯೂಸಿಯಂನಲ್ಲಿ ಟೈಲ್ಸ್‌ಗಳ ಒಂದು ಕಲಾಕೃತಿ ಇದೆ. ಈ ಮ್ಯೂಸಿಯಂನಲ್ಲಿ 6ನೇ ಶತಮಾನದಿಂದ ಹಿಡಿದು 10ನೇ ಶತಮಾನದವರೆಗೆ ಭಾರತೀಯ ಪಾರಂಪರಿಕ ಕಲಾಕೃತಿಗಳ ಸಂಗ್ರಹ ಇದೆ. ಜೊತೆಗೆ ಭಾರತದ ಪ್ರಭಾವವುಳ್ಳ ಶ್ರೀಲಂಕಾ, ನೇಪಾಳ, ಭೂತಾನ್‌ನ ಕಲಾಕೃತಿಗಳಿವೆ. ಇವುಗಳ ಮಧ್ಯದಲ್ಲಿ ಜರ್ಮನ್ ಪ್ರಭಾವ ಪಡೆದ ನನ್ನ ಕಲಾಕೃತಿ ಇದೆ. ಈ ಕೃತಿಗೆ 'ವೆನಿ ವಿದಿ ವಿಕಿ' ('ಐ ಕೇಮ್, ಐ ಸಾ, ಐ ಕಾಂಕ್ವರ್ಡ್') ಅಂತ ಶೀರ್ಷಿಕೆ ಕೊಟ್ಟಿದ್ದೇನೆ.



**ವಿನಿ, ವಿಧಿ, ವಿಸಿ:** ಜರ್ಮನಿಯಲ್ಲಿ ಪ್ರದರ್ಶನಗೊಂಡ ಮಂಗಳೂರು ಹೆಂಚಿನ ಮೇಲೆ ರಚಿತವಾದ ಕಲಾಕೃತಿ

◆ **ಇದನ್ನು ಕೊಂಚ ವಿವರಿಸಿ.**

300 ವರ್ಷಗಳ ಹಿಂದೆ ಕ್ರಿಶ್ಚಿಯನ್ ಮಿಶನರಿಗಳು ಆರು ಸಾವಿರ ಕಿಲೋಮೀಟರ್ ದೂರದಿಂದ ಹಡಗಲ್ಲಿ ಅವರ ಕುಟುಂಬ ಎಲ್ಲಾ ಬಿಟ್ಟು ಇಂಡಿಯಾಕ್ಕೆ ಬಂದರು. ತಮ್ಮ ಧರ್ಮ ಹರಡ್ತೇವೆ ಅಂದರು. ದ ಹೋಲ್ ಐಡಿಯಾ ಇಸ್ ವೆರಿ ಫ್ರಜೈಲ್. ಹೆಂಚನ್ನು ಮಾಡಿರುವ ಮಾಧ್ಯಮ ಟೆರ್ರಾಕೋಟ. ಸುಟ್ಟ ಮಡಕೆಯ ಚೂರುಗಳಿಂದ ನಮ್ಮ ಚರಿತ್ರೆಯ ಪ್ರಾಚೀನತೆ ಕಂಡುಹಿಡೀತೇವೆ. ಅದೇಕಾಲಕ್ಕೆ ಈ ಟೆರ್ರಾಕೋಟ ಬಹಳ ಫ್ರಜೈಲ್. ಕೆಳಗೆ ಬಿದ್ದರೆ ಒಡೆದುಹೋಗುತ್ತೆ. ಅದೇ ಹೆಂಚಿನ ಮೇಲೆ ನಾನು ಹಟಯೋಗಿ ಆಕೃತಿಗಳನ್ನು ಮಾಡಿದೇನೆ ಆವೆ ಮಣ್ಣಲ್ಲಿ. ಈ ಫಿಗರುಗಳನ್ನು ಬಹುದಾಜಿ ಲಾಡ್ ಮ್ಯೂಸಿಯಂನ ಎತ್ನಲಾಜಿಕಲ್ ಕಲೆಕ್ಷಲ್‌ನಿಂದ ಎತ್ತಿಕೊಂಡಿದ್ದೇನೆ. ಹಟಯೋಗಿಗಳು ದೇಹವನ್ನು ದಂಡಿಸಿ ಆಯುಷ್ಯವನ್ನು ವಿಸ್ತರಣೆ ಮಾಡಲು ಬಯಸುತ್ತಾರೆ. ದೀರ್ಘಕಾಲದ ಜೀವನ ಮಾಡಬಹುದು ಅಂತ ಭಾವಿಸ್ತಾರೆ. ಆದರೆ, ಯೋಗಿ ಯಾವಾಗಲೂ ಸಾಯಬಹುದು. ಇದು ಜೀವನದ ಅಸ್ಥಿರತೆಯನ್ನು ತೋರಿಸ್ತದೆ.

◆ **ಈಗ ಏನ್ ಕೆಲ್ಸ ಮಾಡ್ತಾಯಿದ್ದೀರಾ?**

ಸದ್ಯಕ್ಕೆ ಬೆಂಗಳೂರು ಏರ್‌ಪೋರ್ಟಲ್ಲಿ ಒಂದು ಪಬ್ಲಿಕ್ ಸ್ಕಲ್ಪ್ಚರ್ ಮಾಡಿದೆ – 'ವಿ-ಮಾನ' ಅಂತ. ಈ ವರ್ಷದ ಕೊನೆಯ ಭಾಗದಲ್ಲಿ ಮುಂಬೈಯಲ್ಲಿ 'ಇಂಡಿಯಾ ಈಜಿಪ್ಟ್ ಗ್ರೀಸ್ ರೋಂ: ಏನ್ಷಿಯಂಟ್ ಕಲ್ಚರ್ಸ್ ಇನ್ ಕಾನ್ವರ್‌ಜೇಶನ್' ಎನ್ನುವ ಎಕ್ಸಿಬಿಶನ್, ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿ ಬರ್ತಾ ಇದೆ. ಅದರಲ್ಲಿ ಗ್ವಾಲಿಯರ್‌ನಿಂದ ಬರುವ ಒಂದು ವರಾಹ ಶಿಲ್ಪಕ್ಕೆ ಪ್ರತಿಸ್ಪಂದನೆ ಮಾಡ್ತಾ ಇದ್ದೀನಿ. ಇದು ಕಲ್ಲಿನ ಶಿಲ್ಪ. ಇದಕ್ಕೆ 'ಡೇಟಾ ಮೈನಿಂಗ್-2' ಅಂತ ಕರೆದಿದೇನೆ.

* * *

ತಲ್ಲೂರರ ಮಾತುಕತೆಯು ಶಿಲ್ಪ ಕಲಾವಿದರೊಬ್ಬರ ವಿಶಿಷ್ಟ ಅನುಭವ ಮತ್ತು ಚಿಂತನೆಗಳನ್ನು ಒಳಗೊಂಡಿದೆ. ಆಧುನಿಕ ಶಿಲ್ಪಕಲಾಕೃತಿಗಳ